148th, ಕ್ರ.ಸಂ. 28

## ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೇಶವ ಪ್ರಸಾದ್ ಎಸ್ ರವರು ಶೂನ್ಯವೇಳೆಯಲ್ಲಿ ಮಂಡಿಸಿರುವ ಪ್ರಸ್ತಾವನೆಗೆ ಸರ್ಕಾರದ ಉತ್ತರ

******

ಪ್ರಶ್ನೆ: ದಿನಾಂಕ. 21-12-2022 ರಂದು ಸುವರ್ಣ ನ್ಯೂಸ್ ಚಾನಲ್‌ನಲ್ಲಿ ತುಮಕೂರು ಕೋಲೂರು ದಿಣ್ಣೆಯಲ್ಲಿ ಅವ್ಯಾಹತವಾಗಿ ನಡೆಯುತ್ತಿರುವ ಮತಾಂತರದ ಬಗ್ಗೆ ವರದಿಯಾಗಿದ್ದು, ಸಣ್ಣ ಸಣ್ಣ ಗುಂಪುಗಳಾಗಿ ಮಹಿಳೆಯರಿಂದ ಕೂಡಿರುವ ತಂಡಗಳು ಕ್ರಿಸ್ತ ಜನ್ಮ ದಿನಾಚರಣೆ ಮುನ್ನ ನಾವು ಸುವಾರ್ತೆಯನ್ನು ಪ್ರಚಾರ ಮಾಡುತ್ತೇವೆ ಎಂದು ಪೋಲೀಸ್ ಅನುಮತಿ ಪಡೆದು ಮನೆ ಮನೆಗೆ ತೆರಳಿ ಹಿಂದೂ ಧರ್ಮದ ದೇವರುಗಳ ಬಗ್ಗೆ ಅವಹೇಳನ ಮಾಡಿ ಆಮಿಷ ಒಡ್ಡಿ ಮತಾಂತರಕ್ಕೆ ಪ್ರಯತ್ನ ಮಾಡಿರುವ ಕುರಿತು ವರದಿಯಾಗಿದೆ. ಮತಾಂತರ ನಿಷೇಧ ಕಾಯ್ದೆ ಜಾರಿಗೆ ಬಂದ ನಂತರ ಸದರಿ ಕಾನೂನನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಅಧಿಕಾರಿಗಳು, ಪೋಲೀಸ್ ಇಲಾಖೆ ಅಸಮರ್ಥವಾಗಿದೆ. ಈ ಘಟನೆಗೆ ಕಾರಣಕರ್ತರಾದವರ ವಿರುದ್ಧ ಮತಾಂತರ ನಿಷೇಧ ಕಾಯ್ದೆ ಅನ್ವಯ ಪ್ರಕರಣ ದಾಖಲಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಹಾಗೂ ಮತಾಂತರ ನಿಷೇಧ ಕಾಯ್ದೆ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಸರ್ಕಾರ ತುರ್ತಾಗಿ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕೆಂಬುದರ ಬಗ್ಗೆ.

ಉತ್ತರ: ದಿನಾಂಕ: 18.12.2022 ರಂದು ಪಿರ್ಯಾದುದಾರರಾದ ರವಿ.ಆರ್ ಬಿನ್ ರಘು ರವರು ತನ್ನ ಸ್ನೇಹಿತನಾದ ರವಿ ಎಂಬುವರ ಮನೆಗೆ ಹೋದ ಸಮಯದಲ್ಲಿ ಜೆಸ್ಸಿ, ಸಾರಾ, ಚೇತನ್ @ ಜೆಸ್ಸಿ, ಎನ್ನುವ ಕ್ರೈಸ್ತ ಮತಾಂತರಿಗಳು ಹೋಗಿ ರವಿ ಮತ್ತು ಅವರ ಸ್ನೇಹಿತ ಕುಮಾರ್ ಬಿನ್ ಮಾಯಣ್ಣ, ಸಂಜಯ್ ಬಿನ್ ನಾಗರಾಜು, ಪುಟ್ಟಿ ಬಿನ್ ಜಯಶೀಲನ್ ಇವರುಗಳ ಸಮ್ಮುಖದಲ್ಲಿ ಹಿಂದೂ ದೇವರುಗಳು, ಧಾರ್ಮಿಕ ಭಾವನೆಗಳು, ಹಬ್ಬ ಆಚರಣೆಗಳ ವಿರುದ್ಧ ಹೇಳಿ, ಕ್ರೈಸ್ತ ಧರ್ಮಕ್ಕೆ ಮತಾಂತರವಾದರೆ ನಿಮಗೆ ಪರಲೋಕ ಪ್ರಾಪ್ತಿಯಾಗುತ್ತದೆ. ನೀವುಗಳು ಸದಾ ಆತ್ಮರಕ್ಷಣೆ ಹೊಂದುವಿರಿ ಎಂದು ಹೇಳುತ್ತಾ ಕ್ರೈಸ್ತ ಮತಕ್ಕೆ ಮತಾಂತರವಾಗಲು ಆಮಿಷಗಳನ್ನು ಒಡ್ಡಿ, ಬೆದರಿಸುತ್ತಾರೆ. ಇವರ ಹಿಂದೆ ಬಹು ದೊಡ್ಡ ಮತಾಂತರಿಗಳ ಜಾಲವಿರುತ್ತದೆ ಅವರುಗಳು ಮತಾಂತರ ಮಾಡಲು ನಡೆಸಿರುವ ಸಂಭಾಷಣೆಯನ್ನು ವಿಡಿಯೋ ಚಿತ್ರೀಕರಣ ಮಾಡಿಕೊಳ್ಳಲಾಗಿದೆ ಎಂದು ಇತ್ಯಾದಿಯಾಗಿ ನೀಡಿದ ದೂರಿನ ಮೇರೆಗೆ ಜಯನಗರ ಪೊಲೀಸ್ ಠಾಣೆ ಮೊ.ನಂ. 138/2022 ಕಲಂ 295(ಎ) ರೆ/ವಿ 34 ಐ.ಪಿ.ಸಿ. ಮತ್ತು ಕಲಂ 5 ಕರ್ನಾಟಕ ಧಾರ್ಮಿಕ ಸ್ವಾತಂತ್ರ ಹಕ್ಕು ಸಂರಕ್ಷಣಾ ಕಾಯ್ದೆ 2022 ರ ಪ್ರಕಾರ ಪ್ರಕರಣ ದಾಖಲಿಸಿ ತನಿಖೆಯನ್ನು ಕೈಗೊಳ್ಳಲಾಗಿದೆ.

ಪ್ರಕರಣದಲ್ಲಿ ಆರೋಪಿಗಳಾದ ಎ1) ಅನಿತಾ ಟಿ @ ಜೆಸ್ಸಿ ಬಿನ್ ತಿಪ್ಪೇಸ್ವಾಮಿ, 23 ವರ್ಷ, ಎ.ಕೆ. ಜನಾಂಗ, ವಾಸ ಸಾಡೇಪುರ, ಶಿರಾ ಗೇಟ್. ತುಮಕೂರು ಸ್ವಂತ ಊರು ವೈ.ಬಿ. ಹಟ್ಟಿ, ಮಾಡದಕೆರೆ ಹೋಬಳಿ, ಚಿತ್ರದುರ್ಗ ಜಿಲ್ಲೆ ಎ2) ಶ್ರೀಮತಿ. ಪಾರ್ವತಿ @ ಸಹರಾ @ ಸಾರಾ ಕೋಂ ಲೋಹಿತ್ ಕುಮಾರ್, 30 ವರ್ಷ, ಎ.ಕೆ. ಜನಾಂಗ, ವಾಸ ಉರ್ದು ಸ್ಕೂಲ್ ಹಿಂಭಾಗ, ಉಪ್ಪಾರಹಳ್ಳಿ, ತುಮಕೂರು. ಸ್ವಂತ ಊರು ಸಿರಿವರ ಗ್ರಾಮ, ರಾಯಚೂರು ಜಿಲ್ಲೆ ಹಾಗೂ ಕಾನೂನು ಸಂಘರ್ಷಕ್ಕೊಳಗಾದ ಬಾಲಕ ಚೇತನ್ ಬಿನ್ ಲಕ್ಷ್ಮೀನರಸಯ್ಯ, 14 ವರ್ಷ, ಎ.ಕೆ. ಜನಾಂಗ, ಕುಂಕುಮನಹಳ್ಳಿ, ತುಮಕೂರು ತಾಲ್ಲೂಕು ಇವರುಗಳನ್ನು ದಸ್ತಗಿರಿ ಮಾಡಿ ವಿಚಾರಣೆಗೊಳಪಡಿಸಲಾಗಿರುತ್ತದೆ. ಎ1) ಅನಿತ ಟಿ @ ಜೆಸ್ಸಿರವರಿಂದ 2 ಬೈಬಲ್ ಪುಸ್ತಕಗಳನ್ನು ಹಾಗೂ 1 ಮೊಬೈಲ್ ಫೋನ್ ಅನ್ನು ಮತ್ತು ಎ2) ಶ್ರೀಮತಿ ಪಾರ್ವತಿ @ ಸಹರಾ @ ಸಾರಾರವರ 1 ಮೊಬೈಲ್ ಫೋನ್ ಹಾಗೂ ಕಾನೂನು ಸಂಘರ್ಷಕ್ಕೊಳಗಾದ ಬಾಲಕನ ಬಳಿ

ಇದ್ದ 1 ಮೊಬೈಲ್ ಫೋನ್ ಸೇರಿ ಒಟ್ಟು 3 ಮೊಬೈಲ್‌ಗಳನ್ನು ಹಾಗೂ ಸಾಕ್ಷಿ ಕುಟ್ಟಿ ಬಿನ್ ಶ್ರೀ ಜೈಶೀಲನ್ ಇವರು ಮತಾಂತರದ ಬಗ್ಗೆ ಆರೋಪಿಗಳು ನಡೆಸಿದ ಸಂಭಾಷಣೆಯನ್ನು ವಿಡಿಯೋ ಮಾಡಿಕೊಂಡಿರುವ ಮೊಬೈಲ್ ಫೋನ್ ಅನ್ನು ಸಹ ಅಮಾನತ್ತು ಪಡಿಸಿಕೊಳ್ಳಲಾಗಿದೆ.

ಘನ ನ್ಯಾಯಾಲಯದ ಆದೇಶದ ಮೇರೆಗೆ ಆರೋಪಿಗಳಾದ ಎ1) ಅನಿತ ಟಿ @ ಜೆಸ್ಸಿ ಮತ್ತು ಎ2) ಶ್ರೀಮತಿ ಪಾರ್ವತಿ @ ಸಹರಾ @ ಸಾರಾರವರುಗಳನ್ನು ನ್ಯಾಯಾಂಗ ಬಂಧನಕ್ಕೂ ಹಾಗೂ ಕಾನೂನು ಸಂಘರ್ಷಕ್ಕೊಳಗಾದ ಬಾಲಕನನ್ನು ಬಾಲ ಮಂದಿರಕ್ಕೂ ಒಪ್ಪಿಸಲಾಗಿದೆ. ಪ್ರಕರಣದ ತನಿಖೆ ಪ್ರಗತಿಯಲ್ಲಿರುತ್ತದೆ. ಆರೋಪಿಗಳ ವಿರುದ್ಧ ಕಲಂ 5 ಕರ್ನಾಟಕ ಧಾರ್ಮಿಕ ಸ್ವಾತಂತ್ರ ಹಕ್ಕು ಸಂರಕ್ಷಣಾ ಕಾಯ್ದೆ 2022ರ ಪ್ರಕಾರ ಪ್ರಕರಣವನ್ನು ದಾಖಲಿಸಲಾಗಿದೆ. ತನಿಖೆಯನ್ನು ಪಿ.ಎಸ್.ಐ. ಜಯನಗರ ಪೊಲೀಸ್ ಠಾಣೆರವರು ನಡೆಸುತ್ತಿದ್ದು, ಎಲ್ಲಾ ಆಯಾಮಗಳಲ್ಲೂ ತನಿಖೆಯನ್ನು ಕೈಗೊಳ್ಳುವಂತೆ ತನಿಖಾಧಿಕಾರಿಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡಲಾಗಿದೆ. ಪ್ರತಿ ದಿನ ತನಿಖೆಯ ಪ್ರಗತಿಯನ್ನು ಡಿ.ಎಸ್.ಪಿ. ತುಮಕೂರು ಉಪವಿಭಾಗ ಹಾಗೂ ಪೊಲೀಸ್ ಅಧೀಕ್ಷಕರು, ತುಮಕೂರು ಜಿಲ್ಲೆ ರವರು ಪರಿಶೀಲಿಸುತ್ತಿರುತ್ತಾರೆ.

ಸಂಖ್ಯೆ:ಹೆಚ್‌ಡಿ718ಎಸ್‌ಎಸ್‌ಟಿ2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು